ಕುಟುಂಬಗಳನ್ನು ಗುರ್ತಿಸಿ ಸದರಿ ಹಸಿರು ಪಡಿತರ ಚೀಟಿಗಳನ್ನು ರದ್ದು ಮಾಡಲು ಹಾಗೂ ಅರ್ಹ ಕುಟುಂಬಗಳನ್ನು ಗುರ್ತಿಸಿ ಅದಕ್ಕೆ ಸಮಂಜಸವಾಗಿ ಅವರಿಗೆ ಹಸಿರು ಪಡಿತರ ಚೀಟಿಯನ್ನು ವಿತರಿಸಲು ಸಂಬಂಧಪಟ್ಟವರಿಗೆ ಆದೇಶ ನೀಡಲಾಗಿರುತ್ತದೆ. ಮನೆ ಮನೆ ಸಮೀಕ್ಷೆ ಕೆಲಸ ಇನ್ನೂ ನಡೆಯುತ್ತಿರುತ್ತದೆ.

ಹುಬ್ಬಳ್ಳಿ-ಧಾರವಾಡ ಪಡಿತರ ಪ್ರದೇಶಗಳಲ್ಲಿ ಪಡಿತರ ಚೀಟಿಗಳನ್ನು ನೀಡುವುದು.

೧೨೦೩. ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಹುಬ್ಬಳ್ಳಿ-ಧಾರವಾಡ ಪಡಿತರ ಪ್ರದೇಶಗಳಲ್ಲಿ ಸುಮಾರು ೧೬,೦೦೦ ಕುಟುಂಬಗಳಿಗೆ ಪಡಿತರ ಚೀಟಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಸದರಿ ಕುಟುಂಬಗಳಿಗೆ ಹೊಸ ಪಡಿತರ ಚೀಟಿಗಳನ್ನು ವಿತರಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

(ಅ) ಹೌದು. ಕೆಲವು ನಿವಾಸಿಗಳು ಪಡಿತರ ಚೀಟಿ ಹೊಂದಿಲ್ಲವೆಂದು ತಿಳಿದಿದೆ.

(ಆ) ಸರ್ಕಾರವು ಸೂಕ್ತ ಪರಿಶೋಧನೆಯ ನಂತರ ಈ ಅರ್ಜಿದಾರರ ಅರ್ಹತೆಯನ್ನು ಗುರುತಿಸಿ ಹೊಸ ಪಡಿತರ ಚೀಟಿಗಳನ್ನು ವಿತರಿಸುವಂತೆ ಸೂಚನೆ ನೀಡಿರುತ್ತದೆ.

ಭೀಮಾ ನದಿಯ ಮೇಲೆ ಬಂಧಾರ ನಿರ್ಮಿಸುವುದು.

೬೧೬೬. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಇಂಡಿ ಮತ್ತು ಅಫ್ಜಲ್‌ಪುರಗಳ ನಡುವೆ ಭೀಮಾನದಿಗೆ ಒಂದು ಬ್ಯಾರೇಜು ನಿರ್ಮಿಸುವ ಬಗ್ಗೆ ಯೋಜನೆಯಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಹೌದು. ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಬುಯ್ಯಾಹರ ಗ್ರಾಮದ ಬಳಿ ಭೀಮಾ ನದಿಗೆ ಅಡ್ಡಲಾಗಿ ಬಂಧಾರ ನಿರ್ಮಿಸುವ ಬಗ್ಗೆ ಪ್ರಸ್ತಾವನೆಯಿದೆ.

ಇಂಡಿ ತಾಲ್ಲೂಕಿನ ನಿಂಬಾಳ ಸಣ್ಣ ನೀರಾವರಿ ಕೆರೆ ನಿರ್ಮಾಣ

೬೧೬೬. ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ) .—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಇಂಡಿ ತಾಲ್ಲೂಕಿನ ನಿಂಬಾಳ ಸಣ್ಣ ನೀರಾವರಿ ಕೆರೆಯ ಕೆಲಸವನ್ನು ಪ್ರತಿ ವರ್ಷವೂ ಆಯವ್ಯಯದಲ್ಲಿ ಸೇರಿಸುತ್ತಿರುವುದು ನಿಜವಲ್ಲವೇ ?

(ಆ) ಸದರಿ ಕೆರೆಯ ಕೆಲಸವು ಪ್ರಾರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಇ) ಹಾಗಿದ್ದಲ್ಲಿ ಮೇಲೆ ತಿಳಿಸಿರುವ ಕೆಲಸವನ್ನು ಕೊನೆಯ ಪಕ್ಷ ಪ್ರಸಕ್ತ ವರ್ಷದಲ್ಲಾದರೂ ಪ್ರಾರಂಭಿಸಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು) .—

(ಅ) ಹೌದು, ಈ ಕೆಲಸವು ೧೯೮೬-೮೮ ರಿಂದಲೂ ಆಯವ್ಯಯದಲ್ಲಿ ಸೇರಿರುತ್ತದೆ.

(ಆ) ಬಂದಿದೆ.

(ಇ) ಈ ಕಾಮಗಾರಿಯ ಅಂದಾಜು ಪರಿಶೀಲನೆಯಲ್ಲಿದ್ದು, ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಸಾಕಷ್ಟು ಅನುದಾನವಿಲ್ಲದಿರುವುದರಿಂದ, ಈ ಕಾಮಗಾರಿಯನ್ನು ಪ್ರಸಕ್ತ ವರ್ಷದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ.